

### ಸಿನಿಮಾ ವಿಸ್ಮಯ ಜಗತ್ತು

'100 ಕೋಟಿ ಸಿನಿಮಾ' ದಿಲಾವರ್ ರಾಮದುರ್ಗ ಅವರು ಮುಖಪುಟ ಲೇಖನದಲ್ಲಿ ಪ್ರಸ್ತಾಪಿಸಿರುವ ಸಂಗತಿಗಳನ್ನು ಓದಿ ಅಚ್ಚರಿಯಾಯಿತು. ಈ ಸಿನಿಮಾ ಲೋಕವೇ ಒಂದು ವಿಸ್ಮಯ ಜಗತ್ತು.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ/
ಬೋಧನ ಹೊಸಹಳ್ಳಿ ಬಿ.ಎಸ್.ಎನ್./
ಎಚ್.ಆನಂದಕುಮಾರ್, ಚಿತ್ರದುರ್ಗ

### ಕ್ರೀಡಾಲೋಕದ ಮೋಡಿ

ಕುಗ್ರಾಮದ 'ಹುಡುಗಿ' ಕಬಡ್ಡಿಯಲ್ಲಿ ಮಾಡಿದಳು 'ಮೋಡಿ', ವಿಶ್ವಕಪ್ಪನೇ ತಂದಳು 'ನೋಡಿ', ಇಂಥಹ ಪ್ರತಿಭೆಗಳ 'ಕೊಂಡಾಡಿ', ಇತರ ಕ್ರೀಡೆಗಳನ್ನು ಬೆಳೆಯಲು 'ಬಿಡಿ'.

ಕಾರ್ಕಳದ ಮಮತಾ ಪೂಜಾರಿಯ ಸಾಧನೆಯನ್ನು ಕೆ.ಓಂಕಾರಮೂರ್ತಿಯವರ ಲೇಖನ ಸೂಕ್ತವಾಗಿ ಪರಿಚಯಿಸಿಕೊಟ್ಟಿದೆ.

-ಪಿ.ಎನ್. ನಾರಾಯಣ ಭಟ್,
ಕೊಯಿಲತೋಟ/ ಎಸ್.ನಿತ್ಯ, ಮೂಡಬಿದರೆ/
ಕಾಡನೂರು ರಾಮಶೇಷ, ಹುಲಿಮಂಗಲ

### ಮಹಿಳೆಯರ ಹೆಮ್ಮೆ

ಕ್ರಿಕೆಟ್‌ಗೆ ಸಿಗುವ ನೂರನೇ ಒಂದು ಭಾಗ ಪ್ರಚಾರ ಕಬಡ್ಡಿಗೆ ಸಿಕ್ಕಿದ್ದರೆ ಸಾಧನೆ ಮಾಡುವವರ ಹುಮ್ಮಸ್ಸಿಗೆ ಮಿತಿಯೇ ಇರುತ್ತಿರಲಿಲ್ಲ. ಕಬಡ್ಡಿ ಸಾರ್ವಭೌಮ ಭಾರತವೇ ಆಗಿರುವುದರಿಂದ ಮಹಿಳಾ ಕ್ರೀಡಾಪಟುಗಳು ನಿರಾಶೆಯಾಗುವುದು ಬೇಕಿಲ್ಲ.

-ಕೋಟೇಶ್ವರ ಸೂರ್ಯ ನಾರಾಯಣರಾವ್,
ಬೆಂಗಳೂರು

### ಮಾರ್ಮಿಕ ವ್ಯಂಗ್ಯಚಿತ್ರ

ಮಾಧ್ಯಮದವರ ಮೇಲೆ ನಡೆದ ವಕೀಲ ವೃಂದದ ಹಲ್ಲೆಯನ್ನು ತುಂಬ ಮಾರ್ಮಿಕವಾಗಿ ಚಿತ್ರಿಸಿರುವ ಪಿ. ಮಹಮದ್ ಅವರ ವ್ಯಂಗ್ಯಚಿತ್ರ ಸಂದರ್ಭೋಚಿತವಾಗಿತ್ತು.

-ನ.ಅ. ರಾವ್, ಬೆಂಗಳೂರು

### ಯುಗಾದಿ ಉಡುಗೊರೆ

ಎಳೆಯರ ಅಂಗಳದಲ್ಲಿ ಲಲಿತಾ ಕೆ. ಹೊಸಪ್ಯಾಟಿ ಬರೆದ ಮಕ್ಕಳ ಕಥೆ 'ಬೇವಿನ ಹೂ ಸಿಹಿಯಾದ ಕತೆ' ಸುಂದರವಾಗಿತ್ತು. ಯುಗಾದಿ ಹಬ್ಬದ ಸಂದರ್ಭಕ್ಕೆ ಈ ಕಥೆ ಉಡುಗೊರೆಯಾಗಿ ಪರಿಣಮಿಸಿದೆ.

-ರೇಖಾ ರವೀಂದ್ರನಾಥ ಯಡಹಳ್ಳಿ, ಬೀಳಗಿ

### ಪ್ರವಾಸದ ರಿಲ್ಯಾಕ್ಸ್!

ಪ್ರವಾಸ ಪ್ರಯಾಸವಾಗಿರುವ ನನ್ನಂತಹವರಿಗೆ 'ಸುಧಾ'ದಲ್ಲಿ ಪ್ರತಿವಾರ ಒಂದೊಂದು ಉತ್ತಮ ಪ್ರವಾಸ ಲೇಖನ ಇರುವುದರಿಂದ ಅಷ್ಟರಮಟ್ಟಿಗೆ ರಿಲ್ಯಾಕ್ಸ್!

-ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ

### ಪುರಾಣ ಕಥೆಯ ಸಮಕಾಲೀನತೆ

ಬಿ. ತಿಪ್ಪಣ್ಣ ಮರಿಕುಂಟೆ ಅವರ ಕಥೆ 'ಹಸ್ತಾಂತರ' ಉತ್ತಮವಾಗಿದೆ. ರಾಮಾಯಣದ ಒಂದು ಸಂಗತಿಯನ್ನು ಆಧರಿಸಿ, ಸಮಕಾಲೀನ ಸಂದರ್ಭಕ್ಕೆ ಅನ್ವಯವಾಗುವಂತೆ ಕಥೆಗಾರರು ಕಥೆಯನ್ನು ಬರೆದಿರುವುದು ಸಂದರ್ಭೋಚಿತವಾಗಿದೆ. ಪುರಾಣದ ಕಥೆಯು ತನ್ನ ವಸ್ತುವಿನ ದೃಷ್ಟಿಯಿಂದ ಸಮಕಾಲೀನಗೊಳ್ಳುತ್ತದೆ ಎಂಬುದಕ್ಕೆ ಈ ಕಥೆಯು ಸಾಕ್ಷಿಯಾಗಿದೆ.

-ಎನ್. ತಿಪ್ಪನಗೌಡ, ಬೆಂಗಳೂರು/
ಹು.ರಾ. ಸಮುದಪ್ಪ, ಚಿತ್ರದುರ್ಗ/
ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ/
ಮಹೇಶ ಎಸ್ ಕಾಟೇನಹಳ್ಳಿ, ರಾಣೇಬೆನ್ನೂರು

### ಧಾತೂರ ಅಲ್ಲ, ಸತ್ತಾನಾಶೀ

ಗೀತಸದಾ ಮೋಂತಿಮಾರು ಅವರು 'ದತ್ತೂರ' ಬರಹದಲ್ಲಿ ದತ್ತೂರ ಶಬ್ದ ಹಿಂದಿಯ 'ಧಾತೂರ' ಶಬ್ದದಿಂದ ಹುಟ್ಟಿದೆ ಎಂದು ಹೇಳಿದ್ದಾರೆ. ಅದು ತಪ್ಪು. ಹಿಂದಿಯಲ್ಲಿ ಇದನ್ನು 'ಸತ್ತಾನಾಶೀ' ಎಂದು ಕರೆಯುತ್ತಾರೆ. ಹಿಂದಿಯಲ್ಲಿ ಬಳಸಲ್ಪಡುವ ಧಾತೂರ ಪದ ಕನ್ನಡದ ದತ್ತೂರಿಯಿಂದಲೇ ಹುಟ್ಟಿಕೊಂಡಿದ್ದಾಗಿದೆ.

-ಡಾ. ಬಿ.ಆರ್. ಸತ್ಯನಾರಾಯಣ,
ಬೆಂಗಳೂರು



### ಉಪಯುಕ್ತ ಕೊಡುಗೆ

ಸುಧಾ ಯುಗಾದಿ ವಿಶೇಷಾಂಕ 2010ರಲ್ಲಿ ಪ್ರಕಟಿಸಿದ್ದ ಮಂಜುಳಾ ರಾಜ್‌ರ 'ಮನೆ ಒಳಾಂಗಣ ವಿನ್ಯಾಸ' ಎಂಬ ಉಚಿತ ಬೋನಸ್ ಪುಸ್ತಕದಿಂದ ಆದ ಸಹಾಯವನ್ನು ನಾನು ಎಂದಿಗೂ ಮರೆಯುವಂತಿಲ್ಲ. ಈ ಬಾರಿಯ 2012ರ ಯುಗಾದಿ ವಿಶೇಷಾಂಕದ ಜತೆಗೆ 'ಮನೆಯಲ್ಲೇ ಸೌಂದರ್ಯ ಚಿಕಿತ್ಸೆ' ಎಂಬ ಉಪಯುಕ್ತ ಪುಸ್ತಕವನ್ನು ನೀಡಿದ್ದಕ್ಕಾಗಿ 'ಸುಧಾ' ಸಂಪಾದಕೀಯ ಬಳಗಕ್ಕೆ ಧನ್ಯವಾದಗಳು.

- ರೂಪ ಮುಕುಂದ, ಹೊಳೆನರಸೀಪುರ

### ಉತ್ತಮ ಪತ್ರಗಳು

ಸುಧಾ ಯುಗಾದಿ ವಿಶೇಷಾಂಕ-2012 ರಲ್ಲಿ ಓದುಗರ ವೇದಿಕೆಯಲ್ಲಿ 'ಮಕ್ಕಳ ಕೈಯಲ್ಲಿ ಮೊಬೈಲ್' ಶೀರ್ಷಿಕೆಯಡಿ ಬಂದ ಬರಹಗಳು ಪೋಷಕರು ಮತ್ತು ಮಕ್ಕಳು ಒಟ್ಟಿಗೆ ಕುಳಿತು ಓದುವಂತಿವೆ.

-ಎಂ.ಎಲ್. ಲಕ್ಷ್ಮಣ್ ರಾವ್, ದಾವಣಗೆರೆ




ಹೌದು.. ಹೌದು.. ನೀನು ಸಕಾಲದಲ್ಲಿ ಲಂಚ ಕೊಟ್ಟರೆ ನಿನ್ನ ಕೆಲಸಗಳು ಸಕಾಲದಲ್ಲಿ ಆಗುತ್ತವೆ..




ಸುಮ್ನೆ ಕುಳಿತರೆ ನಿದ್ದೆ ಬರುತ್ತೆ ಕಣೆ.. ಅದಕ್ಕೆ ನೋಡುತ್ತಿದ್ದೆ.. ತಪ್ಪೇನೆ!!



ಅಧಿಕಾರ ಕೊಟ್ರೆ ಒಂದು ದಾರಿ, ಇಲ್ಲದಿದ್ರೆ ಮತ್ತೊಂದು ದಾರಿ ಅಂತ ಅದರ ಅರ್ಥವಂತೆ!